**ದಿನಾಂಕಃ 06-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಮ್ ಎಮ್ ಸಿ ವಕೀಲರಿಂದಃ**

ನಮ್ಮ ಊರು ಓಜನಳ್ಳಿ ಎಂದರೆ ಸರಿ. ದಾವಾ ಜಮೀನು ಕಲಕೇರಿ ಹದ್ದಿಯಲ್ಲಿ ಇದೆ ಎಂದರೆ ಸರಿ. ಕಲಕೇರಿ ಮತ್ತು ಓಜನಳ್ಳಿ 8 ರಿಂದ 10 ಕಿ.ಮೀ ಅಂತರದಲ್ಲಿ ಇದೆ. ದಾವಾ ಜಮೀನು ಸರ್ವೇ ನಂ. 60 ಇದೆ, ಬಹುತೇಕ 4 ಎಕರೆ ಇದೆ, ನನಗೆ 2010 ರಿಂದ ಆರೋಗ್ಯ ಸರಿಯಿಲ್ಲ ಎನ್ನುವುದು ಸರಿಯಲ್ಲ.

2. ದಿಃ- 19-12-2012 ರಂದು ಖರೀದಿ ವಚನ ಪತ್ರ ಬರೆದುಕೊಡುವ ಕಾಲಕ್ಕೆ ನಾನು ಸಬ್ ರಿಜಿಸ್ಟರ್ ಕಚೇರಿಗೆ ಹೋಗಿಲ್ಲ, ಆದರೆ ವ್ಯಾಪಾರದ ಮಾತುಕತೆ ನಾನೇ ಮುಗಿಸಿಕೊಟ್ಟಿದ್ದೇನೆ. 6 ಲಕ್ಷ ರೂಪಾಯಿಗೆ ವ್ಯವಹಾರ ಮುಗಿಸಿದ್ದೇನೆ. ಆ ಕಾಲಕ್ಕೆ ನಾನು, ದೇವಪ್ಪ, ಗವಿಸಿದ್ದಪ್ಪ ನಾಯಕ, ನಾಗಪ್ಪ ಇದ್ದೇವು ಬೇರೆ ಯಾರು ಇರಲಿಲ್ಲ. ಈ ವ್ಯವಹಾರ ನಮ್ಮ ಮನೆ ಓಜನಳ್ಳಿಯಲ್ಲಿ ಕುಳಿತು ವ್ಯವಹಾರ ಮಾಡಿದ್ದೇವೆ. ಆ ಪ್ರಕಾರ ದೇವಪ್ಪ ಖರೀದಿ ವಚನ ಪತ್ರ ನಾಗಪ್ಪನಿಗೆ ಬರೆದುಕೊಟ್ಟಿದ್ದಾನೆ ಎಂದರೆ ಸರಿ.

3. ಖರೀದಿ ವಚನ ಪತ್ರ ಬರೆದುಕೊಡುವ ಕಾಲಕ್ಕೆ ದೇವಪ್ಪ ಅದರ ಮಾಲೀಕನಾಗಿದ್ದ ಎಂದರೆ ಸರಿ. ವ್ಯಾಪಾರ ಮಾಡುವಾಗ ಆ ಹೊಲದ ಪಹಣಿ ನೋಡಿದ್ದೆ, ಬೇರೆ ಏನು ನೋಡಿಲ್ಲ. ಖರೀದಿ ವಚನ ಪತ್ರ ಮಾಡಿಸಿಕೊಂಡು ಬಂದ ನಂತರ ಆ ವಿಷಯ ನನಗೆ ಗೊತ್ತಾಗಿದೆ.

4. ಈ ದಾವೆ ಎಷ್ಟು ತಡ ಮಾಡಿ ಸಲ್ಲಿಸಿದ್ದಾರೆ ಅಂತಾ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ಆದರೆ ಒಮ್ಮೆ ಕರೆದು ಹೇಳಿದ್ದೇನೆ ಎನ್ನುತ್ತಾರೆ. ದೇವಪ್ಪ ಯಾವಾಗ ಮರಣ ಹೊಂದಿದ ಮಾಹಿತಿ ಇಲ್ಲ. ದೇವಪ್ಪ ಈ ಜಮೀನಿನ ಮಾಲಿಕ ಅಲ್ಲಾ ಎಂದು ಹೇಳಿ ಬರೆಯಿಸಿಲ್ಲ, ಪಿತ್ರಾರ್ಜಿತ ಆಸ್ತಿ ಅಂತಾ ಹೇಳಿ ಬರೆಯಿಸಿದ್ದೇನೆ.

5. ಹಣ ಕೊಡುವಾಗ ಮತ್ತು ತೆಗೆದುಕೊಳ್ಳುವಾಗ ನಾನು ಇರಲಿಲ್ಲ. ಆರ್ ಟಿ ಜಿ ಎಸ್ ಮತ್ತು ಡಿಡಿ ಮೂಲಕ ನಾಗಪ್ಪ ಹಣ ಕೊಟ್ಟಿದ್ದ ಎಂದು ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಯಿಸಿಲ್ಲ.

6. ಪ್ರತಿವಾದಿ ನಂ. 1 ಮತ್ತು 3 ಇವರು ದಿಃ- 23-09-2019 ರಂದು ಪ್ರತಿವಾದಿ ನಂ. 7 ಶಿವಪ್ಪ ಚೆರಾರಿ ಇವರಿಗೆ ಮಾರಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆದರೆ ದೇವಪ್ಪನ ಮರಣದ ನಂತರ ಆತನ ಇಬ್ಬರು ಹೆಂಡತಿಯರಾದ ಪ್ರತಿವಾದಿ ನಂ. 1 ಮತ್ತು 3 ತಮ್ಮ ಹೆಸರಿಗೆ ಈ ಜಮೀನು ದಾಖಲಿಸಿಕೊಂಡಿದ್ದಾರೆ ಅಂತಾ ನನಗೆ ಗೊತ್ತಾಗಿದೆ. ಮಾರಾಟವಾದ ವಿಷಯ ವಕೀಲರು ಕೇಳಿದರು ನಾನು ಹೇಳಿದ್ದೇನೆ. ಇದು ಮಾರಾಟವಾಗಿ ಒಂದೆರೆಡು ತಿಂಗಳಲ್ಲಿ ಗೊತ್ತಾಗಿದೆ. ಈ ವಿಷಯ ವಾದಿ ನಾಗಪ್ಪ ಹಲಗೇರಿ ಬಂದು ಹೇಳಿದ.

7. ನಿಪಿ 1 ರ ಸಾಕ್ಷಿದಾರಾದ ಶಿವಕುಮಾರ ಮತ್ತು ಮಂಜುನಾಥ ಸಾಕ್ಷಿದಾರರು ಅಲ್ಲಾ ಎಂದು ಸಾಕ್ಷಿ ಪ್ರಮಾಣ ಪತ್ರ ಬರೆಯುವಾಗ ವಕೀಲರಿಗೆ ಹೇಳಿದ್ದೇನೆ. ಆದರೆ ನನಗೆ ಪಕ್ಕಾ ಗೊತ್ತಿಲ್ಲ. ನಿಪಿ 1 ರ ಪ್ರತಿಯನ್ನು ವಕೀಲರು ತೋರಿಸಿದ್ದಾರೆ ಆ ಸಹಿಗಳನ್ನು ನೋಡಿ ಆ ಸಹಿಗಳನ್ನು ನೋಡಿ ನಾನು ಹೇಳಿದ್ದೇನೆ. ಶಿವಕುಮಾರ ಮತ್ತು ಮಂಜುನಾಥರವರು ಸಹಿ ಮಾಡಿದ ಬೇರೆ ದಾಖಲಾತಿಗಳನ್ನು ನೋಡಿಲ್ಲ. ಈ ಕುರಿತು ಏನು ಗೊತ್ತಿಲ್ಲದಿದ್ದರೂ ಸಹ ಪ್ರತಿವಾದಿಯರಿಗೆ ಅನೂಕೂಲ ಮಾಡಲು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಎನ್ನುವುದು ಸರಿಯಲ್ಲ.

8. ನಾನು ಈ ಮೊದಲು ನ್ಯಾಯಾಲಯದಲ್ಲಿ ಯಾವುದೇ ಪ್ರಕರಣದಲ್ಲಿ ಸಾಕ್ಷಿ ಕೊಟ್ಟಿಲ್ಲ. ಸುಮಾರು 20 ರಿಂದ 25 ಪ್ರಕರಣದಲ್ಲಿ ನಾನು ಸಾಕ್ಷಿ ಕೊಟ್ಟಿದ್ದೇನೆ ಎಂದರೆ ಇರಬಹುದು. ಆತ್ಮಿಯತೆ ಇದ್ದರವರ ಪರ ಬಂದು ಸಾಕ್ಷಿ ಕೊಡುತ್ತೇನೆ ಎಂದರೆ ಸರಿಯಲ್ಲ. ಆದರೆ ಇದರಲ್ಲಿ ನಾನು ವ್ಯಾಪಾರ ಮಾಡಿಸಿಸಿದ್ದೇನೆ ಅದಕ್ಕಾಗಿ ಸಾಕ್ಷಿ ಕೊಡುತ್ತಿದ್ದೇನೆ ಎನ್ನುತ್ತಾರೆ.

9. 11-ಇ ಸ್ಕೆಚ್ ಯಾವಾಗ ಮಾಡಿಸಿದರು ಗೊತ್ತಿಲ್ಲ. ಫಾರಂ ನಂ. 10 ಮತ್ತು ಸ್ಕೆಚ್ ಯಾವಾಗ ಮಾಡಿಸಿದರು ಗೊತ್ತಿಲ್ಲ. ದೇವಪ್ಪನ ಕುಟುಂಬದ ಕಲಕೇರಿಯಲ್ಲಿರುತ್ತದೆ ಎಂದರೆ ಸರಿ, ಅವರು ದಿನನಿತ್ಯ ಏನು ವ್ಯವಹಾರ ಮಾಡುತ್ತಾರೆ ಎಂದು ನಾನು ನೋಡುವುದಿಲ್ಲ ಎಂದರೆ ಸರಿ. ಎಲ್ಲಾ

ವ್ಯವಹಾರ ಗೊತ್ತಿದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.
ಸಹಿ/-
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ಕೊಪ್ಪಳ.**